# ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ. ಸಿ. ನಂಃ503/2018**

ಸಿಡಬ್ಲ್ಯುಃ 15
ಪಿಡಬ್ಲ್ಯುಃ 12

| | | |
|---|---|---|
| ಸಾಕ್ಷಿಯ ಹೆಸರು | ಃ | ಬಾಬುಲಾಲ್ |
| ತಂದೆಯ ಹೆಸರು | ಃ | ಗೋಮರಾಮ್ |
| ವಯಸ್ಸು | ಃ | 31 ವರ್ಷ |
| ವೃತ್ತಿ | ಃ | ಗಿರವಿ ಅಂಗಡಿ ವ್ಯಾಪಾರಿ |
| ವಾಸಸ್ಥಳ | ಃ | ವಿರಾಜಪೇಟೆ |

**ದಿನಾಂಕಃ 28.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ನಾನು ವಿನಾಯಕ ಬ್ಯಾಂಕರ್ಸ್ ಎಂಬ ಅಂಗಡಿಯ ಮಾಲೀಕನಾಗಿದ್ದೇನೆ. ಸಾಕ್ಷಿಯು ಸ್ವತ್ತು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-21 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-21 ಎ ಎಂದು ಗುರುತಿಸಲಾಯಿತು. ನಾನು ಎಲ್ಲಿ ಸಹಿ ಹಾಕಿದ್ದೇನೆ ಎಂದು ನೆನಪಿಲ್ಲ. ಮಹಜರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದರ ಬಗ್ಗೆ ನನಗೆ ನೆನಪಿಲ್ಲ. ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ. ಆರೋಪಿಯ ಪರಿಚಯ ಇರುವುದಿಲ್ಲ. ಈ ಪ್ರಕರಣದ ವಿಚಾರ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಮುಖ್ಯ ವಿಚಾರಣೆ ಃ ಮುಕ್ತಾಯ**

**ಪಾಟೀ ಸವಾಲು ಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ದಿಃ28.09.2013 ರಂದು ನಾನು ಅಂಗಡಿಯಲ್ಲಿರುವಾಗ ಆರೋಪಿ ನನ್ನ ಅಂಗಡಿಗೆ ಬಂದು, ಒಂದು ಕರಿಮಣಿ ಸರವನ್ನು ತೋರಿಸಿ, ತುರ್ತಾಗಿ ಹಣಬೇಕಾಗಿರುವುದರಿಂದ ಈ ಸರವನ್ನು ಅಡವಿಟ್ಟುಕೊಂಡು ಹಣಕೊಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ,

ಆಗ ನಾನು ಕರಿಮಣಿಸರವನ್ನು ಪಡೆದುಕೊಂಡು ಪರಿಶೀಲನೆ ಮಾಡಿ, 5 ಸಾವಿರ ರೂ. ಹಣವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ, ದಿ:17.11.2013 ರಂದು ಪೋಲಿಸರು ಆರೋಪಿಯನ್ನು ಕರೆದುಕೊಂಡು ನಮ್ಮ ಅಂಗಡಿಗೆ ಬಂದಿದ್ದು, ಆರೋಪಿಯು ತಾನು ಕಳ್ಳತನ ಮಾಡಿದ ಚಿನ್ನದ ಕರಿಮಣಿಸರವನ್ನು ನನಗೆ ಕೊಟ್ಟಿರುವುದಾಗಿ ಹೇಳಿ ನನ್ನನ್ನು ತೋರಿಸಿ, ಆಗ ಪೋಲಿಸರು ಆರೋಪಿಯ ಪರಿಚಯ ಇದೆಯಾ ಎಂದು ಕೇಳಲಾಗಿ ನಾನು ಈತನು ಈ ಹಿಂದೆ ನನ್ನ ಅಂಗಡಿಗೆ ಬಂದು ಚಿನ್ನದ ಕರಿಮಣಿಸರವನ್ನು ಅಡವಿಟ್ಟಿದ್ದ ವಿಚಾರವನ್ನು ಪೋಲಿಸರಿಗೆ ತಿಳಿಸಿ, ಆಗ ಪೋಲಿಸರು ಇವನು ಈ ಹಿಂದೆ ವಿರಾಜಪೇಟೆ ನಗರದಲ್ಲಿ ರಾತ್ರಿ ಮನೆಗಳ ಬೀಗ ಮುರಿದು ಚಿನ್ನಾಭರಣಗಳನ್ನು ಕಳ್ಳತನ ಮಾಡಿದ್ದು, ಈತನು ಕಳ್ಳತನ ಮಾಡಿರುವ ಚಿನ್ನಾಭರಣಗಳ ಪೈಕಿ ಒಂದು ಕರಿಮಣಿಸರವನ್ನು ನಿಮ್ಮ ಅಂಗಡಿಯಲ್ಲಿ ಅಡವಿಟ್ಟುರುವುದಾಗಿ ನಮ್ಮನ್ನು ಕರೆದುಕೊಂಡು ಬಂದಿದ್ದು, ಆರೋಪಿಯು ಈ ಹಿಂದೆ ನಿಮ್ಮ ಅಂಗಡಿಯಲ್ಲಿ ಅಡವಿಟ್ಟಿರುವ ಕರಿಮಣಿಸರವನ್ನು ಕೊಡುವಂತೆ ನನಗೆ ಕೇಳಿದ ಮೇರೆಗೆ ಅದರಂತೆ ನಾನು ಆರೋಪಿಯಿಂದ ತೆಗೆದುಕೊಂಡಿದ್ದ ಕರಿಮಣಿಸರವನ್ನು ಪೋಲಿಸರ ಮುಂದೆ ಹಾಜರುಪಡಿಸಿದಾಗ, ಪೋಲಿಸರು ಅದನ್ನು ಮಹಜರು ಮೂಲಕ ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ಬರೆದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ್ದು, ಸದರಿ ಹೇಳಿಕೆ ಭಾಗವನ್ನು ನಿಪಿ-22 ಎಂದು ಗುರುತಿಸಲಾಯಿತು. ಆರೋಪಿ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಗೈರು ಹಾಜರಾಗಿದ್ದು, ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ.

**ಪಾಟೀ ಸವಾಲು: ಮುಕ್ತಾಯ**

**ಮರು ವಿಚಾರಣೆ: ಇಲ್ಲ**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ. ಸಹಿ/-

ಪ್ರದೀಪ ಪೋತದಾರ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ವಿರಾಜಪೇಟೆ